ಕೋಣೆಯಲ್ಲಿ ಕುಳಿತು ಲೆಕ್ಕ ಬರೆಯುವಾಗ ಎರಡು ಮಕ್ಕಳ ತಂದೆಯಾಗಿದ್ದ ಆ ಯಜಮಾನ ಕಾರಣವಿಲ್ಲದೇ ಒಳಗೆ ಬಂದು ಕೇಳಿದ್ದನ್ನೇ ಕೇಳುತ್ತ ತನ್ನ ಪಕ್ಕಕ್ಕೇ ಬಂದು ನಿಂತು ಮೈಗೆ ಮೈ ತಾಕಿಸುವುದನ್ನೂ ಗಮನಿಸಿದ್ದಾಳೆ. ರಸ್ತೆಯ ಮೇಲೆ ನಡೆಯುತ್ತ ಹೋಗುವಾಗ ತನ್ನನ್ನು ದಾಟಿ ಹೋಗುವ ಮಂದಿ ಬೇಕೆಂತಲೇ ಮೈಗೆ ಮೈ ತಾಗಿಸುವುದನ್ನೂ ನೋಡಿದ್ದಾಳೆ. ಆಗೆಲ್ಲ ಅವಳ ಮನಸ್ಸು ಪುಳಕಗೊಳ್ಳುವುದಿಲ್ಲ. ಬದಲಿಗೆ ಕೃಷ್ಣನ ನೆನೆಪಿನಲ್ಲಿ ಮುದುಡುತ್ತದೆ. ತಾನವನಿಗೆ ಅವಮಾನ ಮಾಡಿದ ಘಟನೆಗಳು ತಿರು ತಿರುಗಿ ನೆನಪಾಗುತ್ತವೆ. ಅವನ ಮನಸ್ಸಿಗಾಗುತ್ತಿದ್ದ ನೋವಿನ ಬಗ್ಗೆ ತಾನು ಕ್ಯಾರೇ ಮಾಡಲಿಲ್ಲವಲ್ಲ ಎನ್ನುವುದನ್ನು ನೆನೆಸಿಕೊಂಡು ತನ್ನ ಬಗ್ಗೆಯೇ ಹೇಸಿಕೊಳ್ಳುತ್ತಾಳೆ. ಅಷ್ಟು ಅಮಾನುಷವಾಗಿ ನಡೆದುಕೊಳ್ಳಲು ತನಗೆ ಸಾಧ್ಯವಾದುದಾದರೂ ಹೇಗೆ ಎಂದು ಆಶ್ಚರ್ಯಪಡುತ್ತಾಳೆ. ಅಷ್ಟು ಮಾಡಿದರೂ ತನ್ನ ಬಗ್ಗೆ ಅದೇ ಕಾಳಜಿಯನ್ನು ಇಟ್ಟುಕೊಂಡಿದ್ದನಲ್ಲ! ಎಂತಹ ಮನುಷ್ಯ ಅವನು ಎಂದುಕೊಳ್ಳುತ್ತಾಳೆ.

ಈಗ ಉಳಿದದ್ದು ತನ್ನ ಅಸಹಾಯಕತೆಯನ್ನು ನೆನೆನೆನೆಸಿ ಅಳುವುದೊಂದೇ. ತನ್ನ ಬಣ್ಣ ಮತ್ತು ಅಂದದ ಬಗ್ಗೆಯೇ ತನ್ನ ಕಾಳಜಿ ಹೆಚ್ಚಾಗಿತ್ತಲ್ಲ... ಕನಿಷ್ಠ ಕೃಷ್ಣನನ್ನು ಒಬ್ಬ ಮನುಷ್ಯನನ್ನಾಗಿ ನೋಡಲೂ ಇಲ್ಲವಲ್ಲ... ತಾನು ಎಡವಿದೆ. ಎಂದೆಂದಿಗೂ ಮೇಲೇಳಲಾರದಂತೆ ಎಡವಿದೆ ಎನ್ನಿಸಿದ ಅವಳಿಗೆ ತನ್ನ ಕೀಳ್ತನದ ಬಗ್ಗೆ ಅಸಹ್ಯ ಹುಟ್ಟುತ್ತದೆ.

★★★

ಹಾಸಿಗೆಯಲ್ಲಿ ಮಲಗಿದ ಮಗು ನರಳುವುದು ಕೇಳಿಸಿ ಎಚ್ಚತ್ತಳು. ಡಾಕ್ಟರು, 'ಇನ್ನು ಹೆಚ್ಚು ಸಮಯವಿಲ್ಲ' ಎಂದು ಹೇಳಿದ್ದು ಮನಸ್ಸಿಗೆ ಬಂದು ಗಡಿಬಿಡಿಯಾಗುತ್ತದೆ. ಏನಾದರೂ ಮಾಡಿ ಮಗನನ್ನು ಉಳಿಸಿಕೊಳ್ಳಬೇಕು ಎನ್ನುವ ಛಲ ಹುಟ್ಟುತ್ತದೆ. ಆದರೆ ಹೇಗೆ?

ಕೆಲಸಕ್ಕೆ ಹೋಗದ ದಿನಗಳಲ್ಲಿ ಸಂಬಳವಿಲ್ಲ. ಊಟಕ್ಕೂ ತತ್ವಾರ. ಅಂತಹುದರಲ್ಲಿ ಎರಡು ಲಕ್ಷ ಎಲ್ಲಿಂದ ತರುವುದು? ತಲೆ ಮೇಲೆ ಕೈ ಹೊತ್ತು ಕುಳಿತಳು.

ಕೊನೆಯ ಆಸೆ. ತನ್ನ ಬಟ್ಟೆ ಅಂಗಡಿಯ ಯಜಮಾನನ್ನೇ ಕೇಳುವುದು. ಕೊಟ್ಟರೂ ಕೊಟ್ಟಾನು. ತಿಂಗಳ ಸಂಬಳದಲ್ಲಿ ಅರ್ಧದಷ್ಟನ್ನು ಬಿಡುತ್ತೇನೆನ್ನುವುದು. ಬೇರೆ ದಾರಿಯೇ ಇರಲಿಲ್ಲ. 'ಹಣದೊಂದಿಗೆ ಬರುತ್ತೇನೆ. ನೀವು ಆಪರೇಷನ್ನಿಗೆ ತಯಾರಿ ಮಾಡಿ' ಎಂದು ಡಾಕ್ಟರಿಗೆ ಹೇಳಿ ಹೊರಟಳು.

ಅಂಗಡಿಯಲ್ಲಿ ಸಾಹುಕಾರ ಗಡಿಬಿಡಿಯಲ್ಲಿದ್ದ. ಹಿಂಜರಿಯುತ್ತಲೇ ಕೇಳಿದಳು, 'ಮಗು ಆಸ್ಪತ್ರೆಯಲ್ಲಿದೆ. ಆಪರೇಷನ್ ಆಗಬೇಕಾಗಿದೆ. ಸಾಹುಕಾರರೇ ಸ್ವಲ್ಪ ಹಣ ಬೇಕಿತ್ತು'.

'ಎಷ್ಟು ...' ತುಸು ಆಸೆ ಚಿಗುರಿತು ಅವಳಲ್ಲಿ.

'ಎರಡು ಲಕ್ಷ...'

'ಸರಿ... ಒಳಗೆ ಹೋಗಿ ಸ್ವಲ್ಪ ಲೆಕ್ಕ ನೋಡುತ್ತಿರು. ಬರುತ್ತೇನೆ.'

ಸಮಾಧಾನದಿಂದ ಒಳ ಹೋದವಳ ಹಿಂದೆಯೇ ಸಾಹುಕಾರನೂ ಬಂದಿದ್ದ. ಬಂದವನೇ ಬಾಗಿಲನ್ನು ಮುಂದೆ ಮಾಡಿದ್ದ.

'ಆಯ್ತು ರಾಗಿಣಿ, ಏನೋ ಮಗುವಿನ ಆಪರೇಷನ್ನಿಗೆ ಹಣ ಬೇಕು ಎನ್ನುತ್ತಿದ್ದೀಯ. ಕೊಡುತ್ತೇನೆ' ಎಂದವ ಅಲ್ಲಿ ಇಲ್ಲಿ ಲೆಕ್ಕದ ಬಗ್ಗೆ ಕೇಳುವವನಂತೆ ಹತ್ತಿರಕ್ಕೆ ಬಂದಿದ್ದ. ಹಾಗೆ ಬಂದವ ಮೈಗೆ ಮೈ ತಾಗಿಸಿಯೇ ನಿಂತ. ಮುಜುಗರವಾದರೂ ಸಹಿಸಿಕೊಂಡಳು. ಹಣ ಬೇಕಲ್ಲ! ಮಾತು ಮುಂದುವರಿಸಿದ ಅವನು ದೈಹಿಕವಾಗಿಯೂ ಮುಂದುವರಿದಿದ್ದ.